# ***Form No.4.***

## ***Deposition Sheet( R.P.52)***

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**FDP 14/2023**

**PW1**

| | | |
|---|---|---|
| ಸಾಕ್ಷಿಯ ಹೆಸರು | ಃ | ಕೆ. ಶುಭಾ |
| ಗಂಡನ ಹೆಸರು | ಃ | ರಾಜೇಶ್ ಸುವರ್ಣ |
| ಪ್ರಾಯ | ಃ | **46 ವರ್ಷ** |
| ಉದ್ಯೋಗ | ಃ | ವಕೀಲರು |
| ವಾಸ | ಃ | ಮೂಡಬಿದ್ರೆ |

ದಿನಾಂಕ : 12**.08.2025** ರಂದು ಸಿಡಬ್ಲ್ಯೂ - 1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃ

1. ನಾನು ಈ ಕೇಸಿನ ನ್ಯಾಯಾಲಯದ ಆಯುಕ್ತನಾಗಿರುತ್ತೇನೆ. ನಾನು ನೀಡಿದ ವರದಿಯನ್ನು ನಿಸಿ - 1 ಎಂದು, ನಕಾಶೆಯನ್ನು ನಿಸಿ - 2 ಎಂದು, ಎರಡು ಫೋಟೋಗಳನ್ನು ನಿಸಿ - 3 ಎಂದು, ವಾರೆಂಟ್ ನ್ನು ನಿಸಿ - 4 ಎಂದು, ಪಕ್ಷಗಾರರ ವಕೀಲರಿಗೆ ನಾನು ನೀಡಿದ ನೋಟೀಸಿನ ಪ್ರತಿಯನ್ನು ನಿಸಿ - 5

ಎಂದು, ತಹಶೀಲ್ದಾರರಿಗೆ ನಾನು ನೀಡಿದ ನೋಟೀಸಿನ ಪ್ರತಿಯನ್ನು ನಿಸಿ - 6 ಎಂದು, ಪ್ರತಿವಾದಿ ಪರ ವಕೀಲರು ನೀಡಿದ ವರ್ಕ್ ಮೆಮೋ ಮತ್ತು ನಕಾಶೆಯನ್ನು ನಿಸಿ - 7 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಶ್ರೀ ಎನ್.ಎಸ್.ಎನ್. ಅರ್ಜಿದಾರರ ಪರ ವಕೀಲರಿಂದಃ

ಅಳತೆ ಕಾರ್ಯ ಮಾಡಲು ನನಗೆ ವಾರೆಂಟ್ ಮತ್ತು ಡಿಕ್ರಿಯ ಪ್ರತಿಯನ್ನು ನೀಡಲಾಗಿತ್ತು ಎಂದರೆ ಸರಿ. ಡಿಕ್ರಿಯ ಪ್ರಕಾರವಾಗಿ 4 ಜನ ಅರ್ಜಿದಾರರು ಇರುತ್ತಾರೆ ಎಂದರೆ ಸರಿ. ಅಳತೆ ಮಾಡಿದ ದಿನ ಸ್ಥಳದಲ್ಲಿ ಎಲ್ಲಾ ಅರ್ಜಿದಾರರು ಹಾಜರಿರಲಿಲ್ಲ ಎಂದರೆ ಸರಿ. 3 ನೇ ಅರ್ಜಿದಾರರು ಮತ್ತು ಅವರ ಪರ ವಕೀಲರು ಹಾಜರಿದ್ದರು.

ಡಿಕ್ರಿಯ ಪ್ರಕಾರವಾಗಿ ದಾವಾ ಸ್ವತ್ತಿನ ವಿಸ್ತೀರ್ಣ ಎರಡು ಎಕರೆ ಎಂದರೆ ಸರಿ. ಭೂಮಾಪಕ ಕಚೇರಿಯಿಂದ ಬಂದಂತಹ ಸರ್ವೆಯರ್ ರವರು ದಾವಾ ಸ್ವತ್ತಿಗೆ ಸಂಬಂಧಿಸಿದ ನಕಾಶೆಯನ್ನು ತಂದಿದ್ದರು ಎಂದರೆ ಸರಿ. ಸದರಿ ಎಫ್.ಎಂ.ಬಿ. ನಕಾಶೆಯ ಪ್ರಕಾರ ಸ್ಥಳವನ್ನು ಗುರುತಿಸಿರುವುದಿಲ್ಲ. ದಾವಾ ಸ್ಥಳದಲ್ಲಿ ಅಷ್ಟು

ವಿಸ್ತೀರ್ಣದ ಸ್ಥಿರಾಸ್ತಿ ಇರದ ಕಾರಣ ಸದರಿ ನಕಾಶೆಯ ಪ್ರಕಾರ ಸ್ಥಳ ಗುರುತಿಸಲು ಆಗಿರಲಿಲ್ಲ. ದಾವಾ ಸ್ವತ್ತನ್ನು ಅಳತೆ ಮಾಡದೇ ಸ್ವತ್ತು ಇರುವುದಿಲ್ಲ ಎಂದು ಹೇಳಲು ಸಾಧ್ಯವಿರುವುದಿಲ್ಲ ಎಂದರೆ, ಸರ್ವೆಯರ್ ರವರು ಸ್ಥಳದಲ್ಲಿ ಅಳತೆ ಮಾಡಲು ಪ್ರಯತ್ನಿಸಿದ್ದಾರೆ. ಆದರೆ ಅಲ್ಲಿ ಸ್ಥಿರಾಸ್ತಿ ಇರದ ಕಾರಣ, ಅಳತೆಯನ್ನು ಪೂರ್ಣಗೊಳಿಸಲು ಆಗಿರಲಿಲ್ಲ.

ಸರ್ವೆಯರ್ ರವರು ಸರ್ವೆ ನಂಬ್ರ 97/2 ರಲ್ಲಿ 2 ಪಿ1, 2 ಪಿ2, 2 ಪಿ3, 2 ಪಿ4 ನ್ನು ಸೂಚಿಸಿ ನಕ್ಷೆ ನೀಡಿದ್ದಾರೆ ಎಂದರೆ ಸರಿ. ಸದರಿ ಸ್ವತ್ತುಗಳು ದಾವಾ ಸ್ವತ್ತುಗಳು ಎಂದರೆ, 2 ಪಿ1, 2 ಪಿ2, 2 ಪಿ3, 2 ಪಿ4 ಇವುಗಳು ದಾವಾ ಸ್ವತ್ತುಗಳು ಆಗಿರುತ್ತದೆ ಎಂದು ಕಾಣಿಸುತ್ತದೆ. ನನಗೆ ಸರ್ವೆ ಮಾಡುವ ಬಗ್ಗೆ ಅನುಭವ ಇರುತ್ತದೆ. ನಾನು ಇಲ್ಲಿಯವರೆಗೆ ಎಷ್ಟು ಕಮಿಷನರ್ ಕೆಲಸ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಈ ಪ್ರಕರಣದಲ್ಲಿ ಬಿಟ್ಟು ನ್ಯಾಯಾಲಯದ ಆಯುಕ್ತರಾಗಿ ಸಾಕಷ್ಟು ಪ್ರಕರಣಗಳಲ್ಲಿ ವರದಿ ಸಲ್ಲಿಸಿದ್ದೇನೆ.

ಪ್ರಶ್ನೆಃ ಸರ್ವೆ ನಂಬ್ರ 97/2 ರಲ್ಲಿ 2 ಪಿ1 ಇದನ್ನು ಅಳತೆ ಮಾಡಿದ್ದೀರಾ?

ಉತ್ತರಃ ಅಳತೆ ಮಾಡಲು ಪ್ರಯತ್ನಿಸಿದ್ದು, ಅಲ್ಲಿ ಕೋಟೆ ಬಸದಿ ಇದ್ದು, ಅದರಲ್ಲಿ ಪೊದೆ ತುಂಬಿದ ಕಾರಣ ಮತ್ತು ಹಾಜರಿದ್ದ ಪಕ್ಷಗಾರರು ಸದರಿ ಸ್ಥಿರಾಸ್ತಿಯು ನಮ್ಮ ಸ್ವಾಧೀನದಲ್ಲಿರುವುದಿಲ್ಲ ಎಂದು ಹೇಳಿದ ಮೇರೆಗೆ ಅದರ ಅಳತೆ ಮಾಡಿರುವುದಿಲ್ಲ.

ಬಸದಿ ಬರುವ ಸ್ಥಳವು ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ಅಳತೆ ಮಾಡಿದ್ದು, ಅದನ್ನು ನಕ್ಷೆಯಲ್ಲಿ ನಮೂದಿಸಿರುವುದಿಲ್ಲ. ನನಗೆ ದಾವಾ ಸ್ವತ್ತಿನ ವಿಭಾಗ ಮಾಡಲು ಮಾತ್ರ ನ್ಯಾಯಾಲಯದ ನಿರ್ದೇಶನ ಇದ್ದ ಕಾರಣ, ನಾನು ಅದನ್ನು ನಕಾಶೆಯಲ್ಲಿ ನಮೂದಿಸಿರುವುದಿಲ್ಲ. ಬಸದಿಯನ್ನು ಅಳತೆ ಮಾಡಲು ನಾಯಾಲಯದ ಆದೇಶ ಇರಲಿಲ್ಲ ಎಂದರೆ ಸರಿ . ಆದರೆ ಎರಡು ಎಕರೆ ದಾವಾ ಸ್ಥಿರಾಸ್ತಿಯನ್ನು ಗುರುತಿಸುವ ಕಾರಣದಿಂದ ಮತ್ತು ಪಕ್ಷಗಾರರು ತಿಳಿಸಿದ ಮೇರೆಗೆ ಬಸದಿಯನ್ನು ಒಳಗೊಂಡ ಸ್ಥಿರಾಸ್ತಿಯನ್ನು ಅಳತೆ ಮಾಡಲಾಯಿತು. ಬಸದಿಯನ್ನು ಹೊರಗಿನಿಂದ ಅಳತೆ ಮಾಡಲಾಗಿದೆ. ಸದರಿ ಬಸದಿಯ ನಾಲ್ಕು ಸುತ್ತುಗಳಲ್ಲಿ ಪೊದೆಗಳು ತುಂಬಿದ ಕಾರಣ ನನಗೆ ಕಂಪೌಂಡ್ ಗೋಡೆ ಕಾಣಿಸಲಿಲ್ಲ. ಬಸದಿ ಎಂದರೆ ಜೈನರ ಪೂಜಾ ಕೇಂದ್ರಸ್ಥಾನ ಎಂದರೆ ಸರಿ. ಸದರಿ ಬಸದಿಯ ಒಳಗೆ ಹೋಗಲು ದಾರಿ ಮತ್ತು ಒಂದು ಗೇಟ್ ಇತ್ತು. ಬಸದಿಯ ಸುತ್ತಲೂ ಕಲ್ಲಿನ ಗೋಡೆ ಇದ್ದು, ನಾನು ಅದನ್ನು ಅಳತೆ ಮಾಡಿದ್ದೇವೆ ಮತ್ತು ಅದರ ಸುತ್ತ ಪೊದೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ಸಮಯದಲ್ಲಿ 1, 2 ಮತ್ತು 4 ನೇ ವಾದಿಯರು ಹಾಜರಿರದ ಕಾರಣ, ಅವರ ಒಪ್ಪಿಗೆಯನ್ನು ಪಡೆದುಕೊಳ್ಳಲು ಸಾಧ್ಯವಿರುವುದಿಲ್ಲ ಎಂದರೆ, 3 ನೇ ಅರ್ಜಿದಾರರು ಮತ್ತು ಅವರ ಪರ ವಕೀಲರು ಹಾಜರಿದ್ದು, ಹಾಗೆ ತಿಳಿಸಿದ ಕಾರಣ ನಾನು ಅದನ್ನು ಪರಿಗಣಿಸಿದ್ದೇನೆ. ಅಳತೆ ಕಾರ್ಯ ಮಾಡುವ ಸಮಯದಲ್ಲಿ ಮಹಜರು ಮಾಡುವ ಅಗತ್ಯತೆ ಕಂಡು ಬರದ ಕಾರಣ ನಾನು

ಮಹಜರು ಮಾಡಿರುವುದಿಲ್ಲ. 3 ನೇ ಅರ್ಜಿದಾರರು ಮತ್ತು ಅವರ ವಕೀಲರು ಒಪ್ಪಿಗೆ ನೀಡಿದ್ದಾರೆ ಎಂದು ಲಿಖಿತವಾಗಿ ಒಪ್ಪಿಗೆ ಪಡೆದುಕೊಂಡಿರುವುದಿಲ್ಲ. ಪ್ರೀ ಡಿಕ್ರಿಯಲ್ಲಿ ಲಭ್ಯವಿರುವ ಸ್ಥಿರಾಸ್ತಿಯನ್ನು ಪಾಲು ಮಾಡಲು ಹೇಳಿದ ಕಾರಣ ಮತ್ತು ಸ್ಥಳದಲ್ಲಿ ಹಾಜರಿದ್ದ 3 ನೇ ಅರ್ಜಿದಾರರು ಮತ್ತು ವಕೀಲರು ಒಪ್ಪಿಗೆ ನೀಡಿದ ಕಾರಣ ನಾನು ಹಾಗೆ ಅಳತೆ ಮಾಡಿದ್ದೇನೆ.

ಎದುರುದಾರರ ಪರ ವಕೀಲರು ನನಗೆ ಸ್ಥಳದಲ್ಲಿ ವರ್ಕ್ ಮೆಮೋ ನೀಡಿರುತ್ತಾರೆ. ಸದರಿ ವರ್ಕ್ ಮೆಮೋ ನಿಸಿ - 7 ಪ್ರಕಾರ 76 ಸೆಂಟ್ಸ್ ಸ್ವತ್ತನ್ನು ಅಳತೆ ಮಾಡಲು ನಮೂದಿಸಿದ್ದಾರೆ. ಅದರ ಪ್ರಕಾರವಾಗಿ ನಾವು ಅಳತೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಲಭ್ಯವಿದ್ದ ಸ್ವತ್ತನ್ನು ಮಾತ್ರ ನಾವು ಅಳತೆ ಮಾಡಿದ್ದೇವೆ. ದಾವಾ ಸ್ವತ್ತಿನ ಎ ಮತ್ತು ಬಿ ಶೆಡ್ಯೂಲ್ ಸ್ವತ್ತುಗಳು ಸಾಗುವಳಿ ಮಾಡಿದಂತಹ ಸ್ಥಿರಾಸ್ತಿಗಳು ಎಂದರೆ ಸರಿಯಲ್ಲ. ಸದರಿ ಎ ಶೆಡ್ಯೂಲ್ ಸ್ಥಿರಾಸ್ತಿಯಲ್ಲಿ ಒಂದು ಹಂಚಿನ ಮನೆ ಮತ್ತು ಮತ್ತೊಂದು ಆರ್.ಸಿ.ಸಿ ಮನೆ ಹಾಗೂ ಸ್ವಲ್ಪ ಸಾದಾ ಸ್ವರೂಪದ ಮರಗಳಿದ್ದು, ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಸ್ವಲ್ಪ ಸ್ಥಳದಲ್ಲಿ ತೆಂಗಿನ ತೋಟ ಇತ್ತು. ಅದರಲ್ಲಿ ಅಡಿಕೆ ಮರ ಎಷ್ಟು ಮತ್ತು ತೆಂಗಿನ ಮರ ಎಷ್ಟು ಎಂದು ವರದಿಯಲ್ಲಿ ನಮೂದಿಸಿರುವುದಿಲ್ಲ. ನಾನು ಲೆಕ್ಕ ಮಾಡಿರುವುದಿಲ್ಲ. ಆದರೆ ಮರಗಳಿರುವುದನ್ನು ನಮೂದಿಸಿದ್ದೇನೆ. ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಅಡಿಕೆ ಮರಗಳು ಇರುತ್ತದೆ. ತೆಂಗಿನ ಮರಗಳು ದಾವಾ ಸ್ವತ್ತಿನಲ್ಲಿ

ಇರಲಿಲ್ಲ. ಬೇರೆ ಸ್ಥಿರಾಸ್ತಿಯಲ್ಲಿದ್ದು, ಅದನ್ನು ನಾವು ಗುರುತಿಸಿರುವುದಿಲ್ಲ. ಮುಂದುವರಿದು ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ 3 – 4 ಸತ್ತು ಹೋದ ತೆಂಗಿನ ಮರಗಳು ಇತ್ತು.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.